

# ಬೆಳೆ ವಿಮೆ ಕಾಲಕ್ಕನುಗುಣವಾಗಿ ನೀಡಬೇಕು




**ಕೆಂಗೇರಿ, ಆ.23-**ರೈತರು ಬೆಳೆದ ಬೆಳೆಗೆ ಬೆಂಬಲ ಸಿಗಬೇಕು. ಬೆಳೆ ವಿಮೆ ಸರಿಯಾದ ಪ್ರಮಾಣದಲ್ಲಿ ಕಾಲಕ್ಕನುಗುಣವಾಗಿ ಸಿಗಬೇಕೆಂದು ಗುಲ್ಬರ್ಗಾ ವಿಶ್ವವಿದ್ಯಾಲಯದ ಕುಲಪತಿ ನಾಡಕರ್ಣಿ ತಿಳಿಸಿದರು.

ಸಾಮಾಜಿಕ ಮತ್ತು ಆರ್ಥಿಕ ಬದಲಾವಣಾ ಸಂಶೋಧನಾ ಕೇಂದ್ರ ಹಾಗೂ ಕರ್ನಾಟಕ ಕೃಷಿ ಬೆಲೆ ಆಯೋಗ ಜಂಟಿಯಾಗಿ ಆಯೋಜಿಸಿರುವ ವಿಚಾರ ಸಂಕಿರಣದಲ್ಲಿ ಅವರು ಮಾನಡಿದರು.

ಮಳೆಯಿಲ್ಲದೆ ಬೆಳೆ ಬೆಳೆಯಲು ಸಾಧ್ಯವಾಗಿಲ್ಲವಾದರೆ ಬೆಳೆ ಬೆಳೆದರೂ ಬೆಂಬಲ ಬೆಲೆ ಸಿಗುವುದಿಲ್ಲ. ಹಾಗಾಗಿ ಕೃಷಿ ರಂಗ ಒಂದು ರೀತಿಯ ರಿಸ್ಕ್ ಸೆಕ್ಟರ್ ಎನ್ನಬಹುದಾಗಿದೆ ಎಂದು ಬಣ್ಣಿಸಿದ ಅವರು ರೈತರಲ್ಲಿ ಬೆಳೆ ವಿಮೆಗಳ ಬಗ್ಗೆ ಅರಿವು ಮೂಡಿಸುವುದು ಅಗತ್ಯವಾಗಿದೆ ಎಂದು ಹೇಳಿದರು.

ಕರ್ನಾಟಕ ಕೃಷಿ ಬೆಲೆ ಆಯೋಗದ ಮಾಜಿ ಸದಸ್ಯ ಹನುಮೇಗೌಡ ಬಲಗುರ್ಕಿ ಮಾತನಾಡಿ, ರೈತರಿಗೆ ಬೆಳೆ ವಿಮಾ ಯೋಜನೆಗಳು ಸರಿಯಾದ ಪ್ರಮಾಣದಲ್ಲಿ ದೊರೆಯುತ್ತಿಲ್ಲ. ಜತೆಗೆ ಕಾಲಕಾಲಕ್ಕೆ ಸಿಗದೆ ಇರುವುದರಿಂದ ರೈತರು ಆರ್ಥಿಕವಾಗಿ ಕುಗ್ಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಸರ್ಕಾರಗಳು ರೈತರ ಹಿತದೃಷ್ಟಿಯಿಂದ ತಾವು ಬೆಳೆದ ಬೆಳೆಗೆ ಬೆಂಬಲ ಬೆಲೆ ಹಾಗೂ ಬೆಳೆ ವಿಮೆಯನ್ನು ಸಮರ್ಪಕವಾಗಿ ಒದಗಿಸಬೇಕು ಎಂದು ಅವರು ಸಲಹೆ ನೀಡಿದರು.

ಈ ಕಾರ್ಯಕ್ರಮದಲ್ಲಿ ಕೃಷಿ ಬೆಲೆ ಆಯೋಗದ ನಿರ್ದೇಶಕ ಪ್ರೊ.ಎಂ.ಜಿ.ಚಂದ್ರಕಾಂತ್, ಡಾ.ಟಿ.ಎನ್.ಪ್ರಕಾಶ್, ಪ್ರೊ.ರಾಜಶೇಖರ್, ಪ್ರಮೋದ್ ಕುಮಾರ್, ಮೀನಾಕ್ಷಿ ರಾಜೀವ್ ಸೇರಿದಂತೆ ಮತ್ತಿತರರಿದ್ದರು.